ತಂದಿದ್ದ. ತನ್ನ ಹಸ್ತಾಕ್ಷರದಲ್ಲಿ ಪ್ರೇಮ ಪತ್ರ ಬರೆದ ಗ್ರೀಟಿಂಗ್ ಕಾರ್ಡ್ ಮತ್ತು ರಿಸ್ಟ್ ವಾಚನ್ನು ವಿನುತ ರಾಜೇಶನಿಗೆ ಅರ್ಪಿಸಲು ತಂದಿರಿಸಿದ್ದಳು. ಭೇಟಿಯ ಕಾಯುವಿಕೆಯ ಕೊನೆಯ ರಾತ್ರಿಯನ್ನು ಅವರು ರಸಮಯವಾಗಿ ಚಾಟಿಂಗ್ ನಡೆಸುತ್ತಾ ಕಳೆದರು. ಒಬ್ಬರನ್ನೊಬ್ಬರು ಸಂಧಿಸುವ ಆ ಸುಮಧುರ ಸನ್ನಿವೇಶಕ್ಕಾಗಿ ಅವರು ಕಾಯುತ್ತಿದ್ದರು.

ಗುರುವಾರ ಮಧ್ಯಾಹ್ನ ಹನ್ನೆರಡು ಗಂಟೆಗೆ ಹೋಟೆಲ್ ನ್ಯೂ ವೈಸರಾಯ್‌ನಲ್ಲಿ ಭೇಟಿಯಾಗುವ ನಿರ್ಧಾರವಾಗಿತ್ತು. ರಾಜೇಶ ಹನ್ನೊಂದೂವರೆಗೇ ಅಲ್ಲಿದ್ದ. ರೆಸ್ಟೋರೆಂಟಿನಲ್ಲಿ ಕ್ಯಾಬಿನ್ ಒಂದನ್ನು ಬುಕ್ ಮಾಡಿದ ಆತ, ಲಾಬಿಯಲ್ಲಿ ತಿರುಗಾಡುತ್ತಾ ಪ್ರೇಯಸಿಗಾಗಿ ಕಾಯುತ್ತಿದ್ದ.

ಹನ್ನೆರಡಕ್ಕೆ ಹತ್ತು ನಿಮಿಷಗಳಿದ್ದವು. ಮನದಲ್ಲಿಯೇ ವಿನುತಾಳ ಆಕಾರ, ಸೌಂದರ್ಯವನ್ನು ಕಲ್ಪಿಸಿ, ಆಸ್ವಾದಿಸುತ್ತಿದ್ದ ಆತನಿಗೆ ಇನ್ನಷ್ಟು ಕಾಯುವ ಸಹನೆಯಿರಲಿಲ್ಲ.

ಆನ್ ದ ವೇ... ಮೆಸೇಜ್ ನೋಡಿ ಇನ್ನೆಷ್ಟೊತ್ತು ಎಂದು ಹಲುಬಿದ. ರಜಾ ದಿನದಂದು ರಸ್ತೆಯಲ್ಲಿ ಟ್ರಾಫಿಕ್ ಸಿಕ್ಕಾಪಟ್ಟೆ ಹೆಚ್ಚಿತ್ತು. ಲಾಬಿಯಲ್ಲಿದ್ದ ಸೋಫಾದಲ್ಲಿ ಒರಗಿ ಕುಳಿತು ದಾರಿ ಕಾಯುತ್ತಿದ್ದ ರಾಜೇಶನ ನೋಟ ಹೋಟೆಲಿನ ಮೆಟ್ಟಿಲು ಹತ್ತಿ ಒಳಗೆ ಬರುತ್ತಿದ್ದ ಸ್ತ್ರೀಯೊಬ್ಬಳ ಕಡೆಗೆ ಹೋಯಿತು. ಆಕೆಯ ಗುರುತು ಸಿಗುತ್ತಿದ್ದಂತೆಯೇ ಆತನ ಗಂಟಲ ಪಸೆ ಆರಿತು. ಪ್ರಣಯಲೋಕದಲ್ಲಿ ವಿಹರಿಸುತ್ತಿದ್ದ ಆತ ಜರ್ರನೇ ಭುವಿಗಿಳಿದ. ಆಕೆಯನ್ನು ನೋಡಿದ್ದೇ ಆತನಲ್ಲಿದ್ದ ರಸಮಯ ಭಾವ ಮಾಯವಾಗಿತ್ತು. ಆಕೆಯನ್ನು ಆತ ಮರೆಯಲು ಸಾಧ್ಯವೇ ಇರಲಿಲ್ಲ. ಆಕೆಯನ್ನು ನೋಡುತ್ತಲೇ ಅವನ ಮುಷ್ಟಿಗಳು ಬಿಗಿದುಕೊಂಡಿದ್ದವು. ಅಷ್ಟರಲ್ಲಿ ಆಕೆ ತಿರುಗಿ ಎತ್ತಲೋ ಹೋಗಿಯಾಗಿತ್ತು.

ಮೈಮೇಲೆ ತಣ್ಣೀರಿನ ಅಭಿಷೇಕವಾದಂತಾಗಿತ್ತು ರಾಜೇಶನಿಗೆ. ಈ ದರಿದ್ರ ಇಲ್ಲಿಗ್ಯಾಕೆ ಬಂತಪ್ಪಾ! ತೀವ್ರ ಭ್ರಮನಿರಸನವಾಗಿತ್ತು ಆತನಿಗೆ. ಕೆಲ ಕ್ಷಣಗಳ ನಂತರ ತನ್ನನ್ನು ತಾನೇ ಸಮಾಧಾನಪಡಿಸಿ, ಧೈರ್ಯ ಪಡೆದುಕೊಂಡ. ಇದು ಕೇವಲ ಕಾಕತಾಳೀಯವಾಗಿರಬೇಕು. ತಾನು ಈ ಹೋಟೆಲನ್ನು ಆಯ್ಕೆ ಮಾಡಬಾರದಿತ್ತು. ಮನಸ್ಸು ಮುದುಡಿತ್ತು. ನಂತರ ಆ ಹೆಂಗಸು ಕಂಡು ಬರಲಿಲ್ಲ. ಬಹುಶಃ ಆಕೆ ಇದೇ ಹೋಟೆಲಿನಲ್ಲಿ ತಂಗಿರಬೇಕು. ಆಕೆ ತನ್ನನ್ನು ನೋಡದಿದ್ದುದೇ ಒಳ್ಳೆಯದಾಯಿತು. ಬಚಾವ್! ತಲೆ ಕೊಡವಿ ಸಮಾಧಾನಗೊಂಡ ಆತ.

ಎಲ್ಲಿದ್ದೀಯಾ ಚಿನ್ನಾ... ವೆಯ್ಟಿಂಗ್... ಮೆಸೇಜ್ ಕಳಿಸಿದ.

ಜಸ್ಟ್ ಟೂ ಮಿನಿಟ್ಸ್...!

ಎಲ್ಲಿರುವೆ...? ನಿನ್ನನ್ನು ನೋಡಲು ಹುಚ್ಚನಂತೆ ಕಾದಿರುವೆ...

ಕೆಲ ಸಮಯ ಉತ್ತರವಿಲ್ಲ. ನಂತರ,

ನೀವೆಲ್ಲಿದ್ದೀರಿ? ಕೇಳಿದಳಾಕೆ.

ರಿಸೆಪ್ಷನ್‌ನ ಬಲ ಭಾಗದಲ್ಲಿ ಕಾಯುತ್ತಿದ್ದೇನೆ. ನೀನು?

ಹಾಂ... ಜಸ್ಟ್ ಕಮಿಂಗ್... ಸೀ ಯು ದೇರ್...

ಕುಳಿತಲ್ಲಿಂದಲೇ ಎಲ್ಲಾ ಕಡೆಯೂ ತಲೆ ಹೊರಳಿಸಿ ರಾಜೇಶ್ ನೋಡುತ್ತಿದ್ದ, ಹದ್ದಿನಂತೆ ದೃಷ್ಟಿ ಹಾಯಿಸಿ ಹುಡುಕುತ್ತಿದ್ದ. ಇನ್ನೂ ಕಾಯಲು ಆತನಿಗೆ ಅಸಾಧ್ಯವಾಗಿತ್ತು.

ರಿಸೆಪ್ಷನ್ನಿನ ಎಡಗಡೆಗೆ ವಾಷ್ ರೂಂ ಇದ್ದವು. ಹೋಟೆಲಿಗೆ ಆಗಮಿಸಿದ ವಿನುತಾ, ಬಾತ್‌ರೂಮಿಗೆ ಹೋಗಿ ಕೂದಲು ಬಾಚಿ, ಮೇಕಪ್ ಸರಿಪಡಿಸಿ ಫ್ರೆಶ್ ಆಗಿ ಹೊರಗೆ ಬಂದಳು. ನೀಲಿ ಸೀರೆಯಲ್ಲಿ ಆಕೆ ಕಂಗೊಳಿಸುತ್ತಿದ್ದಳು. ಆಕೆ ನಿಜವಾಗಿಯೂ ಸುಂದರಿಯಾಗಿದ್ದಳು. ಮೇಕಪ್‌ನಿಂದಾಗಿ ಅವಳ ಅಂದ ಮಿನುಗುತ್ತಿತ್ತು. ತೃಪ್ತಿಯಿಂದ ತಲೆದೂಗುತ್ತಾ ಹಂಸ ನಡಿಗೆಯಲ್ಲಿ ರಿಸೆಪ್ಷನ್ ಕಡೆಗೆ ತೆರಳಿದಳು ವಿನುತಾ.

ಅಗಲವಾಗಿದ್ದ ಪಿಲ್ಲರ್ ಒಂದರ ಹಿಂದೆ ನಿಂತು ಇಣುಕಿದಳು. ಆ ಕಡೆ ಸೋಫಾಗಳನ್ನು ಇಡಲಾಗಿತ್ತು. ಬಹುತೇಕ ರಶ್ ಇತ್ತು. ಒಮ್ಮಿಂದೊಮ್ಮೆಲೆ ಆಕೆಯ ದೃಷ್ಟಿ ಒಬ್ಬ ವ್ಯಕ್ತಿಯ ಮೇಲೆ ನಿಂತಿತು. ಆತ ಮೊಬೈಲ್‌ನಲ್ಲಿ ಆಟವಾಡುತ್ತಿದ್ದ. ತಕ್ಷಣ ಆತನ್ಯಾರೆಂದು ತಿಳಿಯಿತು ಆಕೆಗೆ.

ಅಷ್ಟೆ. ಆಘಾತಕ್ಕೊಳಗಾದವಳಂತೆ ಮುಂದಿಟ್ಟ ಹೆಜ್ಜೆ ಹಿಂತೆಗೆದಳು ವಿನುತಾ. ಓ ದೇವರೆ! ಈತನೇಕೆ ಇಲ್ಲಿದ್ದಾನೆ? ಅದೂ ಇದೇ ಹೊತ್ತಿನಲ್ಲಿ! ಅವಳ ಉತ್ಸಾಹವೆಲ್ಲಾ ಭರ್ರನೆ ಇಳಿಯಿತು. ಥೆ! ಈ ಶನಿ ಇಲ್ಲಿಗ್ಯಾಕೆ ಬಂತು! ಹುಚ್ಚು ನಾಯಿ! ರೋಷ ಉಕ್ಕಿ ಬಂತವಳಿಗೆ. ಆತ ತನ್ನನ್ನು ನೋಡಲಿಲ್ಲವೆಂಬುದನ್ನು ಖಚಿತವಾಗಿಸಿ, ಹಾಗೆಯೇ ಹಿಂತಿರುಗಿ ವಾಶ್ ರೂಮಿಗೆ ಪ್ರವೇಶಿಸಿದಳು.



ವಿನುತಾಳ ಬರುವಿಕೆಗಾಗಿ ಕಾದು ಬೇಸತ್ತಿದ್ದ ರಾಜೇಶ ಹಲವು ಮೆಸೇಜ್ ಕಳಿಸಿದ್ದ. ವ್ಯಾಲೆಟ್‌ನಲ್ಲಿದ್ದ ಮೊಬೈಲ್ ತೆಗೆದು ಅವನ ಮೆಸೇಜ್ ನೋಡಿದ ವಿನುತ ಮತ್ತೆ ಲವಲವಿಕೆ ಪಡೆದುಕೊಂಡಳು. ಹೋದ ಜೀವ ಮತ್ತೆ ಬಂದಂತೆನಿಸಿತು ಅವಳಿಗೆ. ಉಲ್ಲಸಿತಳಾದಳು.

ಜಸ್ಟ್ ವೈಟ್. ಇನ್ ವಾಶಿಂಗ್ ರೂಮ್, ಸಾರಿ ಹನಿ...

ಎಷ್ಟೊತ್ತು! ಪ್ಲೀಸ್ ಮೇಕ್ ಇಟ್ ಫಾಸ್ಟ್..! ಸಹನೆ ಮೀರುತ್ತಿತ್ತು ರಾಜೇಶನಿಗೆ.

ಅವಳಿಗೆ ತನ್ನ ಮೇಲೆಯೇ ಬೇಸರವೆನಿಸಿತು. ತಾನೀಗ ಹೇಗೆ ಮುಂದುವರಿಯಲಿ? ರಾಜೇಶ್‌ಗೆ ಕಾದು ಕಾದು ಸುಸ್ತಾಗಿರಬೇಕು. ಧೈರ್ಯ ತಂದುಕೊಂಡು ಹೊರ ಬಂದ ಆಕೆ, ಪಿಲ್ಲರ್‌ಗೆ ಅಡ್ಡ ನಿಂತು ಇಣುಕಿದಳು. ಮೊದಲು ಕೂತಿದ್ದ ವ್ಯಕ್ತಿ ಅಲ್ಲಿರಲಿಲ್ಲ. ಅಬ್ಬಾ, ಬಚಾವ್! ಸಮಾಧಾನದ ಉಸಿರೆಳೆದಳು. ಇನ್ನೊಮ್ಮೆ ಇಣುಕಿ, ಆತ ಅಲ್ಲಿಲ್ಲದ್ದನ್ನು ಖಾತರಿಪಡಿಸಿ ನಿಧಾನ ಹೆಜ್ಜೆಗಳನ್ನಿಟ್ಟು ರಿಸೆಪ್ಷನ್ ಕಡೆಗೆ ಚಲಿಸಿದಳು.

ಬ್ಲೂ ಸಾರಿ... ಗೋಲ್ಡನ್ ವ್ಯಾಲೆಟ್ ತನ್ನ ಗುರುತು ಹೇಳಿದಳು.

ರಿಸೆಪ್ಷನಿನ ಎಡ ಬದಿಯಲ್ಲಿದ್ದ ಅಕ್ವೇರಿಯಂನಲ್ಲಿದ್ದ ಮೀನುಗಳನ್ನು ನೋಡುತ್ತಿದ್ದ ರಾಜೇಶ. ವಿನುತಾ ಬಲ ಭಾಗಕ್ಕೆ ನಡೆಯುತ್ತಿದ್ದಳು.

ರೆಡ್ ವೈಟ್ ಟಿ ಶರ್ಟ್, ಬ್ಲೂ ಜೀನ್ಸ್ ಪ್ಯಾಂಟ್.

ಮೆಸೇಜ್ ಕಳಿಸಿ ಹಿಂದಕ್ಕೆ ತಿರುಗಿದ ರಾಜೇಶನಿಗೆ ನೀಲಿ ಸೀರೆಯಲ್ಲಿದ್ದ ಹೆಂಗಸು ಕಂಡಳು. ಮತ್ತೊಮ್ಮೆ ಮೆಸೇಜ್ ಪರಿಶೀಲಿಸಿದ. ಹೌದು! ನೀಲಿ ಸೀರೆ ಧರಿಸಿ, ಚಿನ್ನದ ಬಣ್ಣದ ವ್ಯಾಲೆಟ್ ಹಿಡಿದುಕೊಂಡವಳು ಈಕೆಯೇ. ಅವಳೇ ವಿನುತಾ! ಅವಳನ್ನು ಅನುಸರಿಸಿ ಧಾವಿಸಿದ.

ಎಕ್ಸ್‌ಕ್ಯೂಸ್ ಮಿ... ವಿನು....! ಅವನ ಮಾತು ಪೂರ್ತಿ ಹೊರ ಬರುವ ಮುಂಚೆಯೇ ಆಕೆ ಹಿಂದಕ್ಕೆ ಹೊರಳಿದ್ದಳು. ಅವಳ ಮುಖ ನೋಡಿದಾಕ್ಷಣ ಅವನ ಮಾತು ನಿಂತಿತ್ತು. ಕ್ಷಣ ಮಾತ್ರದಲ್ಲಿ ಅವನ ಮುಖ ಚಹರೆಯೇ ಬದಲಾಗಿತ್ತು. ಆಶ್ಚರ್ಯದ ಜೊತೆ ಆಘಾತ! ರೋಮಾಂಚಕತೆಯ ಗುಂಗಿನಲ್ಲಿದ್ದವನ ಮುಖವೀಗ ಕ್ರೋಧದಿಂದ ಕೆಂಪಾಗಿತ್ತು! ನಿರಾಶೆಯ ಜೊತೆ ಕೋಪ, ಆಕ್ರೋಶ ಅವನಲ್ಲಿ ಸೇರಿತ್ತು.

ಹಿಂದೆ ತಿರುಗಿ ತನ್ನನ್ನು ಕರೆಯುತ್ತಿದ್ದವನನ್ನು ನೋಡಿದ ವಿನುತಳಿಗೂ ಶಾಕ್ ಬಡಿದಿತ್ತು. ಇದೆಂಥ ದುಸ್ವಪ್ನ! ತಾನು ಕಂಡ ಕನಸೇನು, ಇಲ್ಲಿನ ವಾಸ್ತವವೇನು!? ತನ್ನ ಮುಂದೆ ನಿಂತಿದ್ದ ವ್ಯಕ್ತಿಯನ್ನು ನೋಡಿಯೇ ಅವಳ ರಕ್ತ ಕುದಿಯಿತು. ರಮಿಸುವ ಮಾತುಗಳನ್ನು ಉಲಿಯಬೇಕೆಂದಿದ್ದವಳ ತುಟಿಗಳು ಕಿಡಿ ಕಾರುತ್ತಿದ್ದವು! ಪ್ರೇಮದ ವಿನಿಮಯ ಮಾಡಲು ಬಂದವಳೀಗ ರೊಚ್ಚಿಗೆದ್ದ ಕಾಳಿಯಂತಾಗಿದ್ದಳು. ನರನಾಡಿಗಳಲ್ಲಿ ಆಕ್ರೋಶ ನುಗ್ಗಿ ಬರುತ್ತಿತ್ತು. ಶಿಟ್! ಅವಳ ಸಂತೋಷವೆಲ್ಲಾ ಹಾರಿ ಹೋಗಿತ್ತು. ಭ್ರಮನಿರಸನವಾಗಿತ್ತು. ಕೆಲವೇ ಕ್ಷಣಗಳ ಹಿಂದೆ ಸಂತಸ, ಪ್ರೀತಿಯಿಂದ ಕಂಗೊಳಿಸುತ್ತಿದ್ದ ಅವಳ ಮುಖವೀಗ ಸಿಡಿಲು ಬಡಿದವರಂತೆ ಕರಟಿತ್ತು.

ಅಷ್ಟೆ. ನಂತರ ನಡೆದದ್ದನ್ನು ಅಲ್ಲಿದ್ದ ಯಾರೂ ಊಹಿಸಿರಲಿಲ್ಲ.

ಯೂ ಚೀಟ್..! ರ್‍ಯಾಸ್ಕಲ್!

ಯೂ ಬಿಚ್... ಡರ್ಟಿ ಲೇಡಿ!

ಮೊದಲು ಪರಸ್ಪರರನ್ನು ಶಪಿಸಿದರು. ನಂತರ ಬೈದುಕೊಂಡರು. ಮಾತಿಗೆ ಮಾತು ಬೆಳೆದು, ವಿನುತಾ ತನ್ನ ವ್ಯಾಲೆಟ್‌ನಿಂದ ರಾಜೇಶನ ಮುಖಕ್ಕೆ ಬಡಿದಳು. ಅವಳ ಕೂದಲನ್ನು ಹಿಡಿದೆಳೆದ ರಾಜೇಶ. ಶಾಂತವಾಗಿದ್ದ ವಾತಾವರಣ ಒಮ್ಮಿಂದೊಮ್ಮೆಲೆ ಘರ್ಷಣೆಗೆ ತಿರುಗಿದ್ದನ್ನು ಕಂಡ ಎಲ್ಲರೂ ಚಕಿತರಾದರು. ಹೋಟೆಲಿನ ಸಿಬಂದಿಗಳಿಗೆ ಆತಂಕವಾಯಿತು.

ಯಾರಿವರು, ಯಾಕೆ ಕಚ್ಚಾಡುತ್ತಿದ್ದಾರೆ, ಕಾರಣವೇನೆಂದು ಯಾರಿಗೂ